ಮನೆಯವರು ಇವಳನ್ನು ಸರಿ ಮಾಡಲು ನಾನಾ ಪ್ರಯತ್ನಗಳನ್ನು ಮಾಡಲತ್ತಿದ್ದರು. ರಾಧಾ ಆಗೀಗ ಹೇಳಿದ ಸಿನಿಮಾಗಳ ಡುಬ್ಲಿಕೇಟ್ ಸಿಡಿ, ಡಿವಿಡಿಗಳನ್ನು ತಂದು ಕೊಟ್ಟರು. ರಾಧಾ ಅವುಗಳನ್ನು ನೋಡಲೂ ಇಲ್ಲ, ಮುಟ್ಟಲೂ ಇಲ್ಲ.

## 11

ಮರುದಿನ ಬೆಳಿಗ್ಗೆ ಬಾಗಿಲು ಕಟ ಕಟಾಯಿಸಿತು. ಬೇಜಾರಲ್ಲಿ ಮಲಗಿದ್ದ ರಾಧಾ ಬೈದುಕೊಳ್ಳುತ್ತಾ ಎದ್ದು ಬಂದು ಬಾಗಿಲು ತೆಗೆದಾಗ ಸುಕನ್ಯಾ ಎದುರು ನಿಂತಿದ್ದಳು. 'ಲೇ ರಾಧಾ... ಎದ್ದಳು ಎಷ್ಟೋತ್ತು ಮಕ್ಕಂಡಿರ್ತೀ?... 'ನಡೀ ಸಿಗ್ನಲ್ಲಿಗೆ' ಎಂದು ಸೆರಗು ಸರಿಮಾಡಿಕೊಳ್ಳುತ್ತಾ ಅವಸರಿಸಿದಳು. ರಾಧಾ ಆಶ್ಚರ್ಯ ಮತ್ತು ಪರಮಾನಂದದಲ್ಲಿ, 'ಎಲ್ಲಿಗೋಗಿದ್ದೆ? ಏನ್ ಕತೀ?' ಎಂದು ಕೇಳಿದರೆ ಸಮಾಧಾನದಲ್ಲಿ 'ಮೊದ್ಲು ರೆಡಿಯಾಗಿ ಬಾ ಹೋಗು ಎಲ್ಲಾ ಹೇಳ್ತೀನಿ' ಎಂದ ಸುಕನ್ಯಾ ರಾಧಾಳನ್ನು ವಾಪಾಸು ರೂಮಿನೊಳಗೆ ತಳ್ಳಿ ಬಾಗಿಲು ಹಾಕಿಕೊಂಡಳು. ಬಡ ಬಡ ಸಿಂಗಾರಗೊಂಡು ಹೊರ ಬಂದ ರಾಧಾ 'ಸುಕ್ಕು ಸುಕ್ಕೂ...' ಎಂದಳು. ಸುಕನ್ಯಾ ಕಾಣಲಿಲ್ಲ. ಸುಕನ್ಯಾಳನ್ನೇ ಕೂಗುತ್ತಾ ಮನೆಯಲ್ಲಾ ತಿರುಗಾಡಿದಳು. ಗದ್ದಲಕ್ಕೆ ದೊಡ್ಡಕ್ಕ ರೂಮಿನಿಂದ ಹೊರಬಂದಳು. ರಾಧಾಳ ಅವತಾರ ಕಂಡು ಗಾಬರಿಯಾದ ಗೆಳತಿಯರೆಲ್ಲ ಅವಳನ್ನು ಮುಕ್ಕರಿಕೊಂಡರು. ಎಲ್ಲರನ್ನೂ ಸರಿಸಿದ ದೊಡ್ಡಕ್ಕ ಸಮಾಧಾನದಲ್ಲಿ ರಾಧಾಳಿಂದ ಆದದ್ದು ತಿಳಿದು 'ಈ ಹುಡ್ಗೀನ ಹಿಂಗೇ ಬಿಟ್ರೆ ಏನಾನ ಮಾಡ್ಕೆಂಡ್ಬಿಡ್ತತೆ' ಎಂದು ಯೋಚಿಸುತ್ತಿರುವಾಗಲೇ ಆಟೊ ಸಲೀಮ ಬಂದು 'ಅಕಾ, ಟೈಮಾಯ್ತು' ಎಂದು ಅವಸರಿಸಿದ.

**ರಾಧ ಮತ್ತೆ ಮೋಹನನಾದ. ಇಡೀ ಬಾಲ್ಯ ನೆನಪಾಯಿತು. ಕಕ್ಕಪ್ಪ ಮತ್ತು ಸಿನಿಮಾಗಳನ್ನು ತೋರಿಸಿದ್ದ ಅಜ್ಜಿಯೂರಿನ ಸಿದ್ದಲಿಂಗೇಶ್ವರ ಟಾಕೀಸು ಕಣ್ಣಮುಂದೆ ಬಂದು ಉಸಿರು ಮತ್ತೆ ಮತ್ತೆ ಹದ ತಪ್ಪಿತು. ಬಾ ಎನ್ನುವಂತೆ ಸನ್ನೆ ಮಾಡಿದ ದೊಡ್ಡಕ್ಕನ ಜೊತೆ ರಾಧಾ ತೊಟ್ಟಿಲಿನ ಕಡೆಗೆ ಹೆಜ್ಜೆ ಹಾಕಿದಳು.**

ರೆಡಿಯಾಗಿದ್ದ ರಾಧಾಳ ಕೈಯಿಡಿದ ದೊಡ್ಡಕ್ಕ ನಿಧಾನಕ್ಕೆ ಅವಳನ್ನು ಆಟೊ ಹತ್ತಿಸಿಕೊಂಡು ಹೊರಟಳು.

ಆಟೊ ನಿಧಾನಕ್ಕೆ ಯಾವ್ಯಾವೋ ಏರಿಯಾಗಳನ್ನು ಹಾದು ಊರಿನ ಶ್ರೀಮಂತರ ಐಶ್ವರ್ಯ ಕಾಲೋನಿಗೆ ಹೊರಳಿಕೊಂಡಿತು. ರಾಧಾ ಸುಮ್ಮನೆ ದಾರಿ ನೋಡುತ್ತಿದ್ದಳು. ಒಂದೆರಡು ಶಾಮಿಯಾನಗಳನ್ನು ಹಾಕಿದ್ದ ದೊಡ್ಡದೊಂದು ಮನೆಯ ಮುಂದೆ ಆಟೊ ನಿಲ್ಲಿಸಿ ನಿಧಾನಕ್ಕೆ ರಾಧಾಳನ್ನು ಇಳಿಸಿದ ದೊಡ್ಡಕ್ಕ, ಸಲೀಮನಿಗೆ ಆಟೊವನ್ನು ಮುಂದೆ ನಿಲ್ಲಿಸಿ ಒಳ ಬರಲು ಹೇಳಲತ್ತಿದಳು. ಇತ್ತ ರಾಧಾಳ ಕಣ್ಣು ಗೇಟಿನ ಪಕ್ಕದಲ್ಲಿದ್ದ ದೊಡ್ಡ ಫ್ಲೆಕ್ಸ್‌ನ ಮೇಲೆ ನೆಟ್ಟು ಅದರಲ್ಲಿ ತನಗೆ ಐನೂರು ಕೊಡುತ್ತಿದ್ದ ವ್ಯಕ್ತಿ ಫೋಟೊ ಕಂಡು ಗಾಬರಿಯಲ್ಲಿ ಕತ್ತಲೆಗಟ್ಟಿದವು. ಸುತ್ತಲೂ ಏನೋ ಬರೆದಿತ್ತು ಓದಲಾಗಲಿಲ್ಲ. 'ಇವ್ನೇ ಈ ಸೂಳ್ಯಾಮಗಾನೇ' ಎಂದು ರಾಧಾ